

ಅದಕ್ಕೆ ಅವನನ್ನೇ ಹಿಡಿಯಬೇಕು.

ಅವನನ್ನು ಹಿಡಿಯಬೇಕು. ಅವನು ಲ್ಯಾಬ್ ಅಸಿಸ್ಟಂಟ್. ಅವನ ಮನ ಒಲಿಸಬೇಕು. ಅವನಿಗೆ ಒಂದಷ್ಟು ಹಣ ಕೊಡಬೇಕು. ಅದುವೇ ಸರಿ. ಹಾಗೆ ನಿಶ್ಚಯಿಸಿದವನು ಲ್ಯಾಬ್ ಅಸಿಸ್ಟೆಂಟಿನ ಗೆಳೆತನ ಬೆಳೆಸಿ ಕ್ಯಾಂಟೀನಿಗೆ ಕರಕೊಂಡು ಹೋಗಿದ್ದ. ಲ್ಯಾಬ್ ಅಸಿಸ್ಟೆಂಟ್ ಒಡ ಪೆಟ್ಟಿಗೆ ಒಪ್ಪಿರಲಿಲ್ಲ. ನಾನು ಗೋಗರೆದೆ. ಅವಳ ತನ್ನ ಕತೆ ತಿಳಿಸಿದೆ. ನನಗೆ ಅವಳನ್ನು ಕೊಲ್ಲುವ ಉದ್ದೇಶವಿಲ್ಲ. ಶರೀರದ ಯಾವುದೋ ಭಾಗಕ್ಕೆ ಸ್ವಲ್ಪ ಆ್ಯಸಿಡ್ ಎರಚಿ ಅವಳಿಗೊಂದು ಪಾಠ ಕಲಿಸುತ್ತೇನೆ. ಅವಳು ಪಾಠ ಕಲಿತರೆ ನಾನೇ ಅವಳನ್ನು ಮದುವೆಯಾಗುವುದಾಗಿ ಹೇಳಿದೆ. ಲ್ಯಾಬ್ ಅಸಿಸ್ಟೆಂಟ್ ಒಪ್ಪಿದ. ನನಗೆ ನಿನ್ನ ಹಣ ಬೇಡ. ನಿನ್ನ ಪ್ರೇಮ ಸಾಚಾ ಎಂದು ನಂಬಿ ಸ್ವಲ್ಪ ಆ್ಯಸಿಡ್ ಕೊಡುತ್ತೇನೆ. ನನ್ನ ಹೆಸರು ಎಲ್ಲೂ ಬರಬಾರದು ಎಂದು ದೇವರಾಣೆ ಹಾಕಿಸಿಕೊಂಡು, ಒಂದು ಸಣ್ಣ ಬಾಟಲಿಯಲ್ಲಿ ಸಲ್ಫ್ಯೂರಿಕ್ ಆ್ಯಸಿಡ್ ಅನ್ನು ಯಾರಿಗೂ ಕಾಣದಂತೆ ಕೊಟ್ಟಿದ್ದ.

ಆ್ಯಸಿಡ್ ಎರಚಲು ಎರಡು ಬಾರಿ ಪ್ರಯತ್ನಿಸಿ ಸೋತ ಮೇಲೆ ಮನಸ್ಸನ್ನು ಕಲ್ಲು ಮಾಡಿಕೊಂಡ. ಇಷ್ಟಕ್ಕೂ ತಾನೇನು ಕೊಲೆ ಮಾಡುತ್ತೇನೆಯೇ? ಸ್ವಲ್ಪ ಆ್ಯಸಿಡ್ ಮುಖಕ್ಕೆ ಬಿದ್ದರೆ ಅವಳೇನು ಸತ್ತು ಹೋಗುತ್ತಾಳೆಯೆ? ಎರಚಿ ಓಡಿ ಬಚಾವಾದರೆ ಎಲ್ಲವೂ ಸರಿ. ಸಿಕ್ಕಿ ಬಿದ್ದರೆ ಪ್ಲ್ಯಾನೆಲ್ಲಾ ತಲೆಕೆಳಗಾಗುತ್ತದೆ. ತನ್ನ ಮೇಲೆ ಆ್ಯಸಿಡ್ ಎರಚಿದವನನ್ನು ಯಾವ ಹೆಣ್ಣು ತಾನೇ ಮದುವೆಯಾಗುತ್ತಾಳೆ? ಹಾಗಾಗಿ ಬಿಟ್ಟರೆ ಆ್ಯಸಿಡ್ ಎರಚಿ ಫಲವೇನು?

ಅವನು ತಲೆ ಕೊಡವಿಕೊಂಡ. ಮನೆಯಲ್ಲಿ ಅಪ್ಪ ಇದ್ದಾರೆ, ಅಮ್ಮ ಇದ್ದಾರೆ. ತಂಗಿಯೂ ಇದ್ದಾಳೆ. ತಂಗಿ ಕೂಡಾ ಹದಿನೇಳರ ಹರೆಯದವಳೇ. ಚೆನ್ನಾಗಿದ್ದಾಳೆ. ಅವಳಿಗೆ ಅಣ್ಣನೆಂದರೆ ಇನ್ನಿಲ್ಲದ ಅಕ್ಕರೆ. ನೀನು ಕೆಮಿಸ್ಟ್ರಿ ಎಂ.ಎಸ್ಸಿ. ಮಾಡಿ ರಿಸರ್ಚ್ ಮಾಡಣ್ಣ. ನಿನ್ನ ರಿಸರ್ಚ್ ಯಾವ ಲೆವೆಲ್ಲಿಗೆ ಏರಬೇಕೆಂದರೆ ನಿನಗೆ ನೋಬೆಲ್ ಅವಾರ್ಡು ಬರಬೇಕು. ತಂಗಿ ಕಾದಿದ್ದಾಳೆ ಆ ಸಂಭ್ರಮಕ್ಕೆ. ಅಮ್ಮ ಹಾಗೇನೂ ಹೇಳುವುದಿಲ್ಲ. ಆದರೆ ತನ್ನ ಮಗ ಅಸಾಧಾರಣವಾದುದನ್ನು ಏನನ್ನಾದರೂ ಸಾಧಿಸುತ್ತಾನೆ ಎಂಬ ನಿರೀಕ್ಷೆ ಅವಳ ಮುಖದಲ್ಲಿದೆ. ನಾನು ಗಂಭೀರವಾಗಿ ಓದುವುದನ್ನು ಕಂಡಾಗ ಅಪ್ಪ ಅರ್ಥಗರ್ಭಿತವಾಗಿ ಕೆಮ್ಮುತ್ತಾರೆ. ಈಗ ನಾನು ಆ್ಯಸಿಡ್ ಎರಚಿ ಪರಾರಿಯಾದರೆ ಸರಿ. ಸಿಕ್ಕಿಬಿದ್ದರೆ ಕೊಲೆಯ ಪ್ರಯತ್ನದ ಆಪಾದನೆ ನನ್ನ ಮೇಲೆ ಬೀಳುತ್ತದೆ. ಯಾವುದೋ ಸೆಕ್ಷನ್ನು ಹಾಕಿಸಿಕೊಂಡು ಜೈಲಲ್ಲಿ ಕೊಳೆಯಬೇಕಾಗುತ್ತದೆ. ಕೊಲೆಗೆ ಯತ್ನಿಸಿದವನ ಕುಟುಂಬ ಎಂದು ನನ್ನ ತಂದೆ, ತಾಯಿ, ತಂಗಿ ಮಾತು ಕೇಳಬೇಕಾಗುತ್ತದೆ. ತಂಗಿಗೆ ಸಂಬಂಧವೇ ಬಾರದಿರಬಹುದು. ಸೇಡು ತೀರಿಸ ಹೊರಟ ನಾನೇ ಎಲ್ಲದಕ್ಕೂ ಕಾರಣನಾಗುತ್ತೇನೆ.

ಅವನು ಹಿಂದಿರುಗಿ ನಿಂತ. ಕೈಯಲ್ಲಿ ಬಾಟಲು ಭದ್ರವಾಗಿತ್ತು. ನನ್ನನ್ನು ಆ ಹುಡುಗಿ ತಿರಸ್ಕರಿಸಿದರಲ್ಲಿ ತಪ್ಪೇನಿದೆ? ಕಾಲೇಜಿಗೆ ಹೋಗುವವರೆಲ್ಲಾ ನನ್ನ ಹಾಗೆ ಯೋಚಿಸುತ್ತಾರಾ? ಹಾಗೆ ಯೋಚಿಸುತ್ತಿದ್ದರೆ ಎಷ್ಟು ಹೆಣ್ಣುಮಕ್ಕಳು ಆ್ಯಸಿಡ್ ದಾಳಿಗೊಳಗಾಗಬೇಕಿತ್ತು? ಹದಿನೇಳರ ಹರೆಯದ ಅವಳು ಸರಿಯಾಗಿಯೇ ಯೋಚಿಸಿದ್ದಾಳೆ. ಇಪ್ಪತ್ತೆರಡರ ತರುಣ ನಾನು ಯೋಚಿಸುವ ವಿಧಾನ ಸರಿಯಿಲ್ಲ. ಪ್ರೀತಿ ಎನ್ನುವುದು ಬಲಾತ್ಕಾರದಿಂದ ಮೂಡುವುದಿಲ್ಲ. ಇಷ್ಟಕ್ಕೂ ನನ್ನ ಅಪ್ಪ–ಅಮ್ಮ ಏನು ಪ್ರೀತಿಸಿ ಮದುವೆಯಾದರೆ? ಮದುವೆಯ ಬಳಿಕ ಸಂಸಾರದಲ್ಲಿ ಪ್ರೀತಿಯನ್ನು ಅರಸಿದರು. ಇಷ್ಟಕ್ಕೂ ಈ ಸಮಾಜದಲ್ಲಿ ಪ್ರೀತಿಸಿದವರೆಲ್ಲರೂ ಮದುವೆಯಾಗಿದ್ದಾರೆಯೇ? ಯಾವುದು ಶ್ರೇಷ್ಠ? ಪ್ರೀತಿಸಿ ಮದುವೆಯಾಗುವುದೆ? ಅಥವಾ ಮದುವೆಯಾದ ಮೇಲೆ ಪ್ರೀತಿಸುವುದೆ? ನಾನೇನೋ ಪ್ರೀತಿಗಾಗಿ ಅಮಾನುಷ ಕೃತ್ಯ ಮಾಡಹೊರಟಿದ್ದೇನೆ. ಇದು ಎಷ್ಟು ಸರಿ? ಒಬ್ಬಳು ಸರಿದಾರಿಯಲ್ಲಿರುವ ಅಮಾಯಕ ಹೆಣ್ಣಿನ ಬಾಳಲ್ಲಿ ಆಟವಾಡುವ ಸ್ವಾತಂತ್ರ್ಯವನ್ನು ನನಗೆ ಯಾರು ಕೊಟ್ಟರು?

ಅವನು ಬಲಗೈಯಲ್ಲಿರುವ ಆ್ಯಸಿಡ್ ಬಾಟಲಿಯನ್ನೊಮ್ಮೆ ನೋಡಿದ. ಮೈಗೆ ತಾಗಿದರೆ ಭಗ್ಗನೆ ಉರಿಯುವ ಆ್ಯಸಿಡ್ ಹೊರಗಿನಿಂದ ನೋಡಲು ಎಷ್ಟು ಶಾಂತವಾಗಿದೆ? ಇದನ್ನು ಆ ಹುಡುಗಿಯ ಮೇಲೆ ಎರಚುವಾಗ ಗುರಿ ತಪ್ಪಿ ಒಟ್ಟಿಗಿರುವ ಗೆಳತಿಯರ ಮೇಲೆ ಬಿದ್ದರೆ? ಅವರು ಏನು ತಪ್ಪು ಮಾಡಿದ್ದಾರೆಂದು ಆ್ಯಸಿಡ್ ದಾಳಿಗೆ ಬಲಿಯಾಗಬೇಕು? ಹಾಗಾದರೆ ಆ ಹುಡುಗಿಗೆ ತಾನು ಆ್ಯಸಿಡ್ ಎರಚಬಹುದೆ? ಅವಳ ಬಾಳನ್ನು ನಿರ್ಧರಿಸಲು ನನಗೇನು ಹಕ್ಕಿದೆ? ಇಷ್ಟಕ್ಕೂ ಅವಳು ಹೇಳಿದ್ದೇನು? ಓದು ಮುಗಿದು, ಕೆಲಸ ಗಳಿಸಿದ ಮೇಲೆ ಮದುವೆ ಯೋಚನೆ ಎಂದಲ್ಲವೆ? ಅದರಲ್ಲಿ ತಪ್ಪೇನು? ನನಗಿಂತ ನಾಲ್ಕು ವರ್ಷಕ್ಕೆ ಚಿಕ್ಕವಳಾದ ಆ ಹುಡುಗಿ ಸರಿಯಾದ ನಿರ್ಧಾರ ಕೈಗೊಂಡಿದ್ದಾಳೆ. ನಾನೇ ದುಡುಕಿಬಿಟ್ಟೆ. ಈ ಹಾಳು ಆ್ಯಸಿಡ್ ಬಾಟಲಿ ಬೇಡವೇ ಬೇಡ.

ಅವನು ಬಾಟಲಿಯನ್ನು ದೂರಕ್ಕೆ ಎಸೆಯಲು ನಿರ್ಧರಿಸಿದ. ಆದರೆ ಅವನ ಮನಸ್ಸು ಒಪ್ಪಲಿಲ್ಲ. ಇಷ್ಟು ದಿನದಿಂದ ನಾನು ಮಾಡಿದ ತಯಾರಿ ವ್ಯರ್ಥವಾಗಬಾರದು. ನಾನೇನು ದೈಹಿಕ ಸುಖವನ್ನು ಯಾಚಿಸಿದೆನೆ? ಪ್ರೀತಿಸು ಎಂದಷ್ಟೇ ತಾನೇ ಹೇಳಿದ್ದು. ಪ್ರೀತಿ ಎಂತಹ ದಿವ್ಯ ಅನುಭೂತಿ! ನಮ್ಮನ್ನು ಕಾಯೇನ, ವಾಚಾ, ಮನಸಾ ಪ್ರೀತಿಸುವವರೊಬ್ಬರಿದ್ದಾರೆ ಎಂಬ ಭಾವ ಜೀವನವನ್ನು ಪ್ರೀತಿಸುವಂತೆ ಮಾಡುತ್ತದೆ. ಎಂತಹ ತ್ಯಾಗಕ್ಕೂ ಸಿದ್ಧವಾಗುತ್ತದೆ. ಮಾಡುವ ಎಲ್ಲಾ ಕೆಲಸಗಳಲ್ಲಿ ಹೊಸ ಉತ್ಸಾಹ ತುಂಬುತ್ತದೆ. ಆ ಹುಡುಗಿ ಇವೆಲ್ಲದರಿಂದ ನನ್ನನ್ನು ವಂಚಿತಳನ್ನಾಗಿ ಮಾಡಿದಳು. ನಾನು ಪ್ರೀತಿಯ ಪಾಶಕ್ಕೆ ಬಿದ್ದು ಅರೆ ಹುಚ್ಚನಾದೆ. ಅವಳನ್ನು ಬಿಡಬಾರದು. ಇಲ್ಲ. ಬಿಡುವುದಿಲ್ಲ.

ಬಾಟಲಿಯ ಮೇಲೆ ಅವನ ಹಿಡಿತ ಬಲವಾಯಿತು. ಇಲ್ಲ. ಅವಳಿಗೆ ಒಂದು ಪಾಠ ಕಲಿಸದಿದ್ದರೆ ಅವಳು ಓದು ಮುಗಿಸುತ್ತಾಳೆ. ನಾಳೆ ಒಂದು ಕೆಲಸ ಸಿಕ್ಕಿ ಯಾವನೋ ಒಬ್ಬನನ್ನು ಕಟ್ಟಿಕೊಂಡು ಹಾಯಾಗಿರುತ್ತಾಳೆ. ನಾನು?

ನಾನು ಅರೆಹುಚ್ಚನಾಗಿಯೇ ಇರುತ್ತೇನೆ. ಕೋರ್ಸು ಕಂಪ್ಲೀಟ್ ಮಾಡುವುದಿಲ್ಲ. ಅಂಥವನನ್ನು ಯಾರು ಮದುವೆಯಾಗುತ್ತಾರೆ? ಆ ಹುಡುಗಿಯ ತಿರಸ್ಕಾರ ನನ್ನ ಗಂಡುತನಕ್ಕೆಸೆದ ಸವಾಲು. ನನಗೆ ಮದುವೆಯಾಗುವುದಿಲ್ಲ. ಅವಳಿಗೂ ಮದುವೆಯಾಗಬಾರದು. ಹಾಗಾಗಬೇಕಾದರೆ ಅವಳ ಮುಖಕ್ಕೆ ಆ್ಯಸಿಡ್ ಎರಚಲೇಬೇಕು. ನನಗಾದ ಅಪಮಾನಕ್ಕೆ ಪ್ರತೀಕಾರ ಮಾಡಲೇಬೇಕು.

ಅವನು ಕಠಿಣ ನಿರ್ಧಾರ ಕೈಗೊಂಡು ಮುಂದಡಿ ಇಟ್ಟ. ಈಗವನು ಕಾಲೇಜಿನ ಮುಂದಿನ ಮೈದಾನದಲ್ಲಿದ್ದ. ಎಡಬದಿಯಲ್ಲಿ ಆ ಹುಡುಗಿ ತನ್ನಿಬ್ಬರು ಗೆಳತಿಯರೊಡನೆ ಬರುತ್ತಿದ್ದಳು. ಅವನು ನಿಧಾನವಾಗಿ ಹೆಜ್ಜೆ ಹಾಕುತ್ತಾ ಆ್ಯಸಿಡ್ ಬಾಟಲಿಯ ಮುಚ್ಚಳ ತೆರೆಯಲು ಆರಂಭಿಸಿದ.

ಒಂದು ಕ್ಷಣ ಅವನ ಕೈ ತಡವರಿಸಿತು. ಅವನ ಏಕೈಕ ಮುದ್ದು ತಂಗಿಯ ಮುಖ ಕಣ್ಣೆದುರು ಕಾಣಿಸಿಕೊಂಡಿತು. 'ಅಣ್ಣಾ, ನನ್ನನ್ನು ಯಾರಾದರೂ ಪ್ರೀತಿಸಿ ಹೀಗೆ ಮಾಡುವುದನ್ನು ನೀನು ಸಹಿಸುತ್ತೀಯಾ?' ಎಂದು ಆ ಸುಂದರಮುಖ ಪ್ರಶ್ನಿಸಿತು. ಅವನು ವ್ಯಗ್ರನಾದ. ಕುತ್ತಿಗೆಯ ನಾಳಗಳು ಬಿಗಿದುಕೊಂಡವು. ಮುಖದಲ್ಲಿ ಕಠೋರ ಭಾವ ಮೂಡಿತು. ಅವನು ದೊಡ್ಡ ಸ್ವರದಲ್ಲಿ ಇಲ್ಲ ಎಂದು ಕಿರುಚಿ ಬಾಟಲಿಯನ್ನು ತನ್ನೆಲ್ಲಾ ಶಕ್ತಿ ಹಾಕಿ ದೂರಕ್ಕೆ ಎಸೆದ.

ಆ ಹುಡುಗಿ ಮತ್ತು ಅವಳ ಗೆಳತಿಯರಿಗೆ ಏನೊಂದು ಅರ್ಥವಾಗದೆ ಕಣ್ಣು ಬಾಯಿ ಬಿಟ್ಟು ಅವನನ್ನೇ ನೋಡತೊಡಗಿದರು.

ಪ್ರತಿಕ್ರಿಯಿಸಿ: feedback@sudha.co.in